ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:1924/2019

ಚಾಸಾ:1 ಪ್ರಾಸಾ:1

ದಿನಾಂಕ: 21.11.2024

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀ ಮಾರ್ಕ್ ಡಿ ಕೋಸ್ತ |
| ತಂದೆಯ ಹೆಸರು | : | ಲ್ಯಾಡ್ರೋ ಕೋತಾ |
| ವಯಸ್ಸು | : | 71 ವರ್ಷ |
| ಉದ್ಯೋಗ | : | ನಿವೃತ್ತ ಮೆಕಾನಿಕ್ |
| ವಾಸ ಸ್ಥಳ | : | ಕೋಣಿ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

1ನೇ ಆರೋಪಿ ಮತ್ತು 2ನೇ ಆರೋಪಿ ನನ್ನ ಹೆಂಡತಿ ಮತ್ತು ಮಗ. ನಾನು ಮತ್ತು ಆರೋಪಿತರು ನನ್ನ ಕೋಣಿಯ ಮನೆಯಲ್ಲಿ ಅವರಿಗೆ ಮಾಡಿಕೊಟ್ಟಿರುವ ಭಾಗದಲ್ಲಿ ಅವರು ವಾಸವಾಗಿದ್ದು, ನನ್ನ ಭಾಗದಲ್ಲಿರುವ ಜಾಗದಲ್ಲಿ ತೆಂಗಿನ ಮರಗಳು ಇದ್ದು ನಾನು ಇಲ್ಲದ ಸಮಯದಲ್ಲಿ ಅಲ್ಲಿ ಬಿದ್ದ ಕಾಯಿಗಳನ್ನು 1ನೇ ಆರೋಪಿ ತೆಗೆದುಕೊಂಡು ಹೋಗುತ್ತಿದ್ದು, ಆದ್ದರಿಂದ ನಾನು ಹೋಗಲು ಇದ್ದ ದಾರಿಗೆ ಕಲ್ಲು ಕಟ್ಟಿರುತ್ತೇನೆ.

ದಿ: 03-04-2019 ರಂದು ಸಂಜೆ 5 ಗಂಟೆ ಸುಮಾರಿಗೆ ಆರೋಪಿತರು ಮೇಲೆ ಹೇಳಿದ ಕಲ್ಲನ್ನು ತೆಗೆಯುತ್ತಿದ್ದನ್ನು ಕಂಡು ಪ್ರಶ್ನಿಸಿರುತ್ತೇನೆ. ಆಗ ಅದು ನನ್ನ ಇಷ್ಟ ನೀನು ಯಾರು ಪ್ರಶ್ನಿಸಲು ಎಂದು 1ನೇ ಆರೋಪಿ ನನ್ನನ್ನು ಕೇಳಿ ಅವಾಚ್ಯ ಶಬ್ದಗಳಿಂದ ನಿಂಧಿಸಿರುತ್ತಾರೆ. ಸುಮಾರು ಅರ್ಧ ಗಂಟೆ ನಂತರ 2ನೇ ಆರೋಪಿ ಅಲ್ಲಿಗೆ ಬಂದು 1ನೇ ಆರೋಪಿಯೊಂದಿಗೆ ಸೇರಿಕೊಂಡು ನನಗೆ ಹೊಡೆದಿರುತ್ತಾರೆ. ಆಗ ಸ್ಥಳದಲ್ಲಿ ಚಾಸಾ-2 ಮತ್ತು 3ರವರು ಇದ್ದರು. 1ನೇ ಆರೋಪಿ ನನ್ನ ಮೇಲೆ

ದೊಣ್ಣೆಯಿಂದ ಹೊಡೆದಿರುತ್ತಾರೆ. 2ನೇ ಆರೋಪಿ ತುಳಿದಿರುತ್ತಾರೆ. ಇದರಿಂದ ನನ್ನ ಬೆನ್ನಿಗೆ ಪೆಟ್ಟಾಗಿರುತ್ತದೆ. ಅನಂತರ ನಾನು ಆಸ್ಪತ್ರೆಗೆ ಹೋಗಿ ದಾಖಲಾಗಿರುತ್ತೇನೆ.

ದಿಃ 04-04-2019 ರಂದು ನಾನು ಆಸ್ಪತ್ರೆಯಲ್ಲಿ ದಾಖಲಾಗಿದ್ದಾಗ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿ ಹೇಳಿಕೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಮಾರನೇ ದಿನ ಪೊಲೀಸರು ಮನೆಗೆ ಭೇಟಿ ನೀಡಿ ನಾನು ತೋರಿಸಿದ ಜಾಗದಲ್ಲಿ 5 ರಿಂದ 5-30ರವರೆಗೂ ಪಂಚನಾಮೆ ಜರುಗಿಸಿ ಸ್ಥಳದಲ್ಲಿ ಬಿದ್ದಿದ್ದ ದೊಣ್ಣೆಯನ್ನು ತೆಗೆದುಕೊಂಡು ಹೋಗಿರುತ್ತಾರೆ. ಆ ಕಾಲಕ್ಕೆ ನಮ್ಮ ಮನೆಯ ಪಕ್ಕದ ಇಬ್ಬರು ವ್ಯಕ್ತಿಗಳು ಇದ್ದರು. ಅವರ ಹೆಸರು ನೆನಪಿಲ್ಲ.

ಸಾಕ್ಷಿಯು ಸ್ಥಳ ಹಾಗೂ ಸ್ವತ್ತು ಸ್ವಾಧೀನತಾ ಪಂಚನಾಮೆಯಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ದೊಣ್ಣೆಯನ್ನು ನೋಡಿ ಗುರುತಿಸಿದ್ದು ಅದನ್ನು ಮುಮಾ1 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಗೆ ಪೋಟೋ ತೋರಿಸಲಾಗಿದ್ದು ಅದರಲ್ಲಿ ತನ್ನನ್ನು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ಭಾಗಶಃ ವಿರುದ್ದವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**<u>ಪಾಟೀ ಸವಾಲುಃ ಮಾನ್ಯ ಸ.ಸ.ಅ.ರವರಿಂದಃ</u>**

1ನೇ ಆರೋಪಿ ನಾನು ಕಟ್ಟಿದ ಕಲ್ಲನ್ನು ಕಿತ್ತು ಬೀಸಾಡಿ ಕಟ್ಟೆಗೆಯನ್ನು ತರುತ್ತಿದ್ದರು ಎಂದರೆ ಸರಿ. ಆ ಕೃತ್ಯವನ್ನು 2ನೇ ಆರೋಪಿಗೆ ತೋರಿಸಿದ್ದು, ಅನಂತರದಲ್ಲೂ 1ನೇ ಆರೋಪಿ ಪುನಃ ಸದ್ರಿ ಕೃತ್ಯವನ್ನು ಎಸಗಿರುತ್ತಾರೆ ಎಂದರೆ ಸರಿ. ಮುಮಾ1 ರಿಂದ ನನ್ನ ಪಕ್ಕೆಗೆ ಹೊಡೆದಿರುತ್ತಾರೆ ಎಂದರೆ ಸರಿ. 2ನೇ

ಆರೋಪಿ ನನ್ನನ್ನು ಹಿಡಿದು ಎಳೆದು ಕೆಳಗೆ ಬೀಳಿಸಿದ ನಂತರ ಇಬ್ಬರೂ ನನ್ನನ್ನು ತುಳಿದಿರುತ್ತಾರೆ ಎಂದರೆ ಸರಿ. ಅಲ್ಲಿಗೆ ಚಾಸಾ-3 ರವರು ಬಂದಿದ್ದು, 2ನೇ ಆರೋಪಿ ಆತನನ್ನು ತುಳಿದಿರುತ್ತಾರೆ ಎಂದರೆ ಸರಿ. ನಂತರ ಇಬ್ಬರೂ ಸೇರಿ ನನ್ನನ್ನು ನಿಂಧಿಸಿರುತ್ತಾರೆ. ಪೊಲೀಸರು ಪಂಚನಾಮೆ ಜರುಗಿಸಲು ದಿಃ 06-04-2019 ರಂದು ಬಂದಿರುತ್ತಾರೆ ಎಂದರೆ ನನಗೆ ನೆನಪಿಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಾದ ಶ್ರೀ ಬಿ.ಆರ್.ಎನ್ ರವರಿಂದಃ</u>**

ನನಗೂ ಮತ್ತು ಆರೋಪಿತರ ನಡುವೆ ಸುಮಾರು 8 ವರ್ಷಗಳಿಂದ ತಗಾದೆ ಇರುತ್ತದೆ. ಈ ಪ್ರಕರಣ ದಾಖಲಾಗುವ ಮೊದಲು ನನ್ನ ವಿರುದ್ದ ಸುಮಾರು 3 ಪ್ರಕರಣಗಳು ದಾಖಲಾಗಿರುತ್ತವೆ. ಒಂದು ಪ್ರಕರಣದಲ್ಲಿ ನಾನು ಕತ್ತಿ ಹಿಡಿದು ಆರೋಪಿತರನ್ನು ತಡೆಯಲು ಹೋಗುತ್ತಿದ್ದ ವೀಡಿಯೋ ಎಲ್ಲೆಡೆ ಹರಿದಾಡಿತ್ತು. ಆರೋಪಿತರು ಸುಮಾರು 5ವರೆ ವರ್ಷಗಳಿಂದ ಬೇರೆಯಾಗಿ ವಾಸವಿದ್ದರು. ಈ ಪ್ರಕರಣ 2019ರಲ್ಲಿ ದಾಖಲಾಗಿರುತ್ತದೆ. ಈಗ 2024 ಎಂದರೆ ಸರಿ. ಈ ಪ್ರಕರಣ ಆಗುವ ವೇಳೆಗೆ ಆರೋಪಿತರು ಬೇರೆ ಮನೆಯಲ್ಲಿ ವಾಸವಾಗಿರಲಿಲ್ಲ. 3 ಪ್ರಕರಣಗಳಲ್ಲೂ ನಾನು ನ್ಯಾಯಾಲಯದ ಮುಂದೆ ಹಾಜರಾಗುತ್ತಿದ್ದೇನೆ. ಸದ್ರಿ ಪ್ರಕರಣಗಳು ನಾನು ಆರೋಪಿತರ ಮೇಲೆ ಹಲ್ಲೆ ಮಾಡಿರುವುದಾಗಿ ಅಪಾದಿಸಿರುತ್ತದೆ ಎಂದರೆ ಸರಿ.

ನಾನು ನನ್ನ ಮನೆಯ ಭಾಗವನ್ನು ಆರೋಪಿತರು ವಾಸಿಸಲು ಅನುಕೂಲ ಮಾಡಿಕೊಟ್ಟಿರುವುದು ಒಪ್ಪಿಗೆ ಮೇರೆಗೆ ಆಗಿರುತ್ತದೆ. ಆದರೂ ಅವರು ಬಿದ್ದ ಕಾಯಿಯನ್ನು ತೆಗೆದುಕೊಳ್ಳುವುದು ಅಥವಾ ಕಟ್ಟಿಗೆ ತೆಗೆದುಕೊಳ್ಳುವುದು ನನಗೆ ವಿರೋಧವಾಗಿರುತ್ತದೆ. ಜೀವನಾಂಶಕ್ಕಾಗಿ 1ನೇ ಆರೋಪಿ ನನ್ನ ವಿರುದ್ದ ಅರ್ಜಿ ಸಲ್ಲಿಸಿರುತ್ತಾರೆ ಎಂದರೆ ಸರಿ. ಅದಾಗಿ 1 ತಿಂಗಳ ನಂತರ ನಾನು ನನ್ನ ಇಬ್ಬರ ಮಕ್ಕಳ ವಿರುದ್ದ ಜೀವನಾಂಶಕ್ಕಾಗಿ ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿ. ಆ 3 ಪ್ರಕರಣಗಳು ಆದ ನಂತರ ನಾನು ಈ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿ.

ನಾನು ಕೆಂಪು ಕಲ್ಲು ಇಟ್ಟು ಮಣ್ಣಿನಲ್ಲಿ ಕಟ್ಟಿರುತ್ತೇನೆ. ನಾನು ಬರುವ ವೇಳೆಗೆ ಕಲ್ಲುಗಳನ್ನು ತೆಗೆಯುತ್ತಿದ್ದರು. ದೊಡ್ಡ ಮರದ ತುಂಡಿನಲ್ಲಿ ಕಲ್ಲುಗಳನ್ನು ತೆಗೆಯುತ್ತಿದ್ದರು. ಸದ್ರಿ ಮರದ ತುಂಡು

ಅನಂತರ ಆರೋಪಿತರು ತೆಗೆದುಕೊಂಡು ಹೋದರು. ಆ ಮರದ ತುಂಡನ್ನು ನಾನು ನೋಡಿರುತ್ತೇನೆ. ಸದ್ರಿ ದಿನ 1ನೇ ಆರೋಪಿ ಕಾಯಿ ತೆಗೆದುಕೊಂಡು ಹೋಗಿದ್ದನ್ನು ನಾನು ನೋಡಿಲ್ಲ. ಘಟನಾ ಸ್ಥಳದ ಅಕ್ಕಪಕ್ಕ 4-5 ಮನೆಗಳು ಇವೆ. ಅವರೆಲ್ಲರೂ ನನಗೆ ಪರಿಚಯಸ್ಥರಾಗಿದ್ದು ಯಾವುದೇ ವೈಶ್ಯಮ್ಯ ಇಲ್ಲ. ಅವರುಗಳೆಂದರೆ ನೀಲು, ಶಂಕರ, ಸುನಂದ ಶೆಟ್ಟಿ, ಎನ್ ಕೆ ಹೆಬ್ಬಾರ್ ಮತ್ತು ಇತರರ ನೆನಪಿಲ್ಲ.

ನಾವು ಕೊಂಕಣಿ ಭಾಷೆ ಮಾತನಾಡುತ್ತೇವೆ. ಸಾಮಾನ್ಯವಾಗಿ ನಮ್ಮ ಮನೆಯಲ್ಲಿ ಕೊಂಕಣಿ ಭಾಷೆಯಲ್ಲಿ ಮಾತನಾಡುತ್ತೇವೆ. ಯಾವ ಭಾಷೆಯಲ್ಲಿ ಬೈದಿದ್ದಾರೆ ಎಂದು ನನಗೆ ನೆನಪಿಲ್ಲ. ಘಟನೆಯ ಹಿನ್ನೆಲೆಯಲ್ಲಿ ನಾನು ಚಾಸಾ3ರವರೊಂದಿಗೆ ಚಿಕಿತ್ಸೆಗೆ ಹೋಗಿರುತ್ತೇನೆ. ಅವರು ನಮ್ಮ ಪಕ್ಕದ ಮನೆಯವರು. ಆಸ್ಪತ್ರೆಯಲ್ಲಿ 1 ದಿನ ಚಿಕಿತ್ಸೆ ಪಡೆದಿರುತ್ತೇನೆ. ಮುಮಾ1 ರಿಂದ 4-5 ಪೆಟ್ಟು ಬಿದ್ದಿತ್ತು. ಸಾಮಾನ್ಯವಾಗಿ ಬಲವಾಗಿ ಹೊಡೆದರೆ ಊತದ ಗಾಯವಾಗುತ್ತದೆ ಎಂದರೆ ಸರಿ. ವೈದ್ಯರಿಗೆ ದೊಣ್ಣೆಯಿಂದ ಹಲ್ಲೆ ಮಾಡಿದ್ದು ಎಂದು ತಿಳಿಸಿರುತ್ತೇನೆ ಆದರೆ ಯಾವುದೇ ಗಾಯವಾಗಿಲ್ಲ. ನನ್ನನ್ನು ಬಿಟ್ಟು ಮತ್ತೆ ಯಾರಿಗೂ ಹೊಡೆದಿರುವುದಿಲ್ಲ.

ದೂರನ್ನು ನೀಡಲು ನಾನು ಠಾಣೆಗೆ ಹೋಗಿಲ್ಲ. ಆದರೆ ಮಾರನೇ ದಿನ ಭೇಟಿ ನೀಡಿರುತ್ತೇನೆ. ಠಾಣೆಯಲ್ಲಿ ಯಾವುದೇ ಸಹಿ ಪಡೆದಿಲ್ಲ. ಪೊಲೀಸರು ಸೂಚಿಸಿದಂತೆ ಹೋಗಿರುತ್ತೇನೆ ಆದರೆ ಸಹಿ ಮಾಡಿದ ನೆನಪಿಲ್ಲ. 2ನೇ ಬಾರಿಗೆ ನಾನು ಮತ್ತು ಚಾಸಾ-3ರವರು ಠಾಣೆಗೆ ಒಟ್ಟಾಗಿ ಹೋಗಿರುತ್ತೇವೆ. ಆ ವೇಳೆಗೆ ಚಾಸಾ-5 ಮತ್ತು 6ರವರು ಠಾಣೆಯಲ್ಲಿ ಇದ್ದರು. ಠಾಣೆಯಲ್ಲಿ ನಾನು ಚಾಸಾ-5 ಮತ್ತು 6ರವರು ಸಹಿ ಮಾಡಿರುವುದು ಎಂದರೆ ಸಾಕ್ಷಿಯು ಸಹಿ ಮಾಡಿದ್ದೇನೆ ಆದರೆ ಠಾಣೆಯಲ್ಲಿ ಅಥವಾ ಮನೆಯಲ್ಲಿಯಾ ಎಂದು ನೆನಪಿಲ್ಲ ಎಂದು ನುಡಿಯುತ್ತಾರೆ.

ಘಟನೆ ನಡೆದ ಮರುದಿನ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿರುತ್ತಾರೆ. ಆ ಸಮಯದಲ್ಲಿ ಪೊಲೀಸರು ಅಕ್ಕಪಕ್ಕದ ಸ್ಥಳೀಯರನ್ನು ವಿಚಾರಣೆ ಮಾಡಿಲ್ಲ. ನಾನು 2016 ರಲ್ಲಿ ನಿವೃತ್ತಿ ಹೊಂದಿರುತ್ತೇನೆ. ನಾನು 1ನೇ ಆರೋಪಿ ಸಲ್ಲಿಸಿದ ಜೀವನಾಂಶದ ಅರ್ಜಿಯಲ್ಲಿ ಸ್ವಲ್ಪ ಸಮಯ ಜೀವನಾಂಶ ನೀಡಿದ್ದು ಈಗ ನೀಡುತ್ತಿಲ್ಲ. ನನ್ನ ಹೆಂಡತಿ ಮತ್ತು ಮಕ್ಕಳಿಗೆ ನನ್ನ ದುಡಿಮೆಯಲ್ಲಿ ಹಕ್ಕು

ಇರುತ್ತದೆ ಎಂದರೆ ನನಗೆ ತಿಳಿದಿಲ್ಲ. ಅವರು ದುಡಿದ ದುಡ್ಡಿನಲ್ಲಿ ನನಗೆ ಹಕ್ಕಿರುತ್ತದೆ ಕಾರಣ ಅವರು ನಾನು ದುಡಿದು ಸಾಕಿದ್ದು, ಅವರ ದುಡ್ಡಿನಿಂದ ಸಾಕಾಬೇಕಾಗಿರುತ್ತದೆ.

ಉದ್ದೇಶಪೂರ್ವಕವಾಗಿ ಆರೋಪಿತರನ್ನು ಮನೆಯಿಂದ ಹೊರಗೆ ಹಾಕಲು ಅವರ ವಿರುದ್ದ ಹಲವಾರು ಸುಳ್ಳು ಪ್ರಕರಣಗಳನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಬಳಿ ಹೇರಳವಾದ ಹಣ ಇದ್ದು, ಪ್ರಭಾವ ಬೀರಿ ಆರೋಪಿತರ ವಿರುದ್ದ ಪ್ರಕರಣವನ್ನು ದಾಖಲಾಗುವಂತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರ ಮೇಲೆ ಇರುವ ವೈಶ್ಯಮ್ಯದಿಂದ ಸುಳ್ಳು ಪ್ರಕರಣಗಳನ್ನು ದಾಖಲಿಸುವ ಹವ್ಯಾಸವಾಗಿದೆ ಎಂದರೆ ಸರಿಯಲ್ಲ. ಮೇಲೆ ಅಪಾದಿಸಿದಂತೆ ಯಾವುದೇ ಘಟನೆ ನಡೆದಿಲ್ಲವಾದರೂ ಪೊಲೀಸರ ಮೇಲೆ ಪ್ರಭಾವ ಬೀರಿ ಆರೋಪಿತರ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**